ಒಪ್ಪಿ ದೇವತೆಗಳು ಅದನ್ನೇ ಅನುಗ್ರಹಿಸಿ ಹರಸಿದರು. ಎಚ್ಚರಗೊಂಡ ಆ ವ್ಯಕ್ತಿಗೆ ಅಚ್ಚರಿಯಾಯಿತು. ಮೇಘಧರನು ತನಗಾಗಿ ಧನವನ್ನು ಬೇಡಲಿಲ್ಲವೆಂಬ ಭಾವನೆಯು ಮನದ ಮೂಲೆಯಲ್ಲಿ ಕಾಡಿತು. ವಿರಕ್ತನಾಗಿ, ಧರ್ಮದಲ್ಲಿ ಆಸಕ್ತನಾಗಿ ವನಕ್ಕೆ ನಡೆದನು. ಜಪತಪಗಳಲ್ಲಿ ಮುಳುಗಿದನು. ಹಣ್ಣು, ಗಡ್ಡೆ–ಗೆಣಸುಗಳಿಂದಲೇ ದೇಹವನ್ನು ಸಂರಕ್ಷಿಸಿಕೊಂಡನು. ದೇವತೆಗಳಿಗೆ ಅತಿಥಿಗಳಿಗೆ ಕೊಟ್ಟು ಮಿಕ್ಕಿದರೆ ಅಷ್ಟೇ ತಾನು ಆಹಾರ ಸ್ವೀಕರಿಸುತ್ತಿದ್ದನು. ಕ್ರಮೇಣ ಅವನಿಗೆ ಆಚರಣೆಯಲ್ಲಿ ಬಲವಾದ ಆಚಾರ ಗೋಚರಿಸಿತು. ಧರ್ಮದಲ್ಲಿ ಮಾಗಿದನು ಬಾಗಿದನು. ಬುದ್ಧಿಯು ಸಿದ್ಧಿಯ ಕಡೆ ಸಾಗಿತು. ತನ್ನ ವ್ರತ ನಿಯಮಗಳನ್ನು ಬಿಗಿಗೊಳಿಸಿದನು. ಹೀಗೆ ಆತ ಆಚರಿಸಿದ ಧರ್ಮದಿಂದ ಅವನಿಗೆ ದಿವ್ಯದೃಷ್ಟಿ ಪ್ರಾಪ್ತಿಯಾಯಿತು. ಅವನಾಡುವ ನುಡಿಗಳೆಲ್ಲ ನಡೆದೇ ತೀರುತ್ತಿದ್ದವು. ಅಪೂರ್ವ ಶಕ್ತಿಗಳ ಗಣಿಯಾದ. ಯಾರದ್ದೋ ಬಳಿ ಧನಕ್ಕಾಗಿ ವರ ಬೇಡುವ ತುಡಿತದಲ್ಲಿ ಇದ್ದವನು ತಾನೇ ವರ ಕೊಡುವ ಮಟ್ಟಕ್ಕೆ ಬಂದು ನಿಂತ. ಹೀಗೆ ಅಪೂರ್ವ ಶಕ್ತಿಗಳ ಸಾಕಾರಮೂರ್ತಿಯಾದ ಆ ವ್ಯಕ್ತಿಯ ಮುಂದೆ ಒಮ್ಮೆ ಮೇಘಧರ ಬಂದು ನಿಂತನು. ಮೇಘಧರ ಆ ವ್ಯಕ್ತಿಗೆ ‘ಧನ ಬಯಸಿದ ಅರಸರನ್ನು ನಿನ್ನ ದಿವ್ಯದೃಷ್ಟಿಯಿಂದೊಮ್ಮೆ ನೋಡು. ನರಕದಲ್ಲಿ ಬಿದ್ದು ಪಾಪದ ಮೂಟೆಯನ್ನು ಹೊತ್ತು ಅಳುವಿನ ಮಡುವಿನಲ್ಲಿ ವಿಲವಿಲನೇ ಪರಿತಪಿಸಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಅರ್ಥ ಮನುಷ್ಯನಿಗೆ ಅನರ್ಥವನ್ನೇ ತರುತ್ತದೆಂದು ಭಾವಿಸಿ ನಿನಗಾಗಿ ನಾನು ದೇವತೆಗಳಲ್ಲಿ ಅರ್ಥವನ್ನು ಬೇಡದೇ ಧರ್ಮವನ್ನು ಬೇಡಿದೆ. ಬೇಸರವಾಯಿತೇ?’ ಎಂದ.

‘ಮೇಘಧರ! ಅಂದು ನಾನು ದುಗ್ಗಾಣಿಯ ದಾಹದಲ್ಲಿ ಬೆಂದು ನಿನ್ನಲ್ಲಿ ಬೇಸರ ಮಾಡಿಕೊಂಡು ನೊಂದು ವನವಾಸದ ಕಡೆ ನಡೆದೆ. ನಿನ್ನ ಸ್ನೇಹವನ್ನು, ದೂರದೃಷ್ಟಿಯನ್ನು ತಿಳಿಯದೇ ಕನಿಷ್ಠನಾಗಿಬಿಟ್ಟೆ. ಉತ್ಕೃಷ್ಟವಾದ ಧರ್ಮವನ್ನು ನನಗಾಗಿ ಕೇಳಿ ಅನುಗ್ರಹಿಸಿದೆ ನೀನು. ಕೇವಲ ಅರ್ಥ ಕೇಳಿದ್ದರೆ ಅದು ಕಳೆದುಹೋಗುತ್ತಿತ್ತು. ನೀನು ಕೇಳಿದ ಧರ್ಮದಿಂದ ಎನಗೆ ಅರ್ಥ–ಕಾಮ–ಮೋಕ್ಷಗಳೆಲ್ಲ ಸುಲಭವಾಗಿವೆ. ನೀ ಮಾಡಿದ ಉಪಕಾರಕ್ಕೆ ನಾ ಚಿರಋಣಿ’ ಎಂದು ಸಂಭ್ರಮಿಸಿದನು. ಧರ್ಮ ಅತಿಶ್ರೇಷ್ಠವಾದದ್ದು. ಧರ್ಮವೊಂದಿದ್ದರೆ ಸಾಕು ಮನುಷ್ಯ ಬಲಿಷ್ಟನಾಗುತ್ತಾನೆ. ಅರ್ಥ, ಕಾಮಗಳೆಲ್ಲವೂ ಮಾನವನನ್ನು ಹುಣ್ಣಾಗಿಸದೇ ಹಣ್ಣಾಗಿಸುತ್ತವೆ ಎಂದು ಈ ಉಪನ್ಯಾಸದ ಮೂಲಕ ಭೀಷ್ಮಾಚಾರ್ಯರು ಅರುಹಿದರು. ಹೀಗಾಗಿ ಮಾನವ ದುಗ್ಗಾಣಿಗಾಗಿ ದುಃಖಿತರಾಗಿ ಶವವಾಗದೇ ಧರ್ಮಕ್ಕಾಗಿ ಮುನ್ನುಗ್ಗಬೇಕು ಎಂದು ಆವ್ಯಕ್ತಿ ಹೇಳಿದ. ■



ಗಣೇಶ್ ಅರಳಿಕಟ್ಟೆ

# ಮಳೆ–ಹಸಿರು ಹೊನ್ನು

■ ಎಸ್.ಎನ್. ಚಂದ್ರಕಲಾ ಕೊಪ್ಪ

ಮಳೆಗಾಲವು
ಬರುತಲಿಹುದು
ನೋಡು ಮೋಡ ಮೆರವಣಿಗೆ

ಚಂಡ ಮಾರುತವು
ಮಳೆಗೆ ಸ್ವಾಗತವು
ಇಳೆಯು ಹರುಷ ತೋರಿದೆ

ಮೊದಲ ಮಳೆಗೆ
ಮಣ್ಣಿನ ಘಮವು
ನವಿಲು ನರ್ತನದ ಚೆಲುವು

ಕೊಳೆಯ ಕಳೆದು
ಕೊರಡು ಕೊನರಿ
ಭೂಮಿ ಅಂದ ದ ತಾಣವು

ಚಿಗುರು ತೋರಣ
ಹಸಿರು ಶ್ರಾವಣ
ಒಲಿದು ವರುಣ ಧರೆಗೆ

ಗದ್ದೆ ಸೊಬಗಲಿ
ಸಸಿಯ ನಾಟಿಯು
ಭತ್ತ ಬೆಳೆ ಜೀವ ಪೊರೆಯಲು

ತೆಂಗು ಕಂಗು
ಬಾಳೆ ನೋಟದಿ
ತೋಟ ದಟ್ಟ ಛಾವಣಿಯು

ವರುಣನ ಅಬ್ಬರ
ಶರಧಿಯ ಉಬ್ಬರ
ಜಲ ಮೂಲ ಆಳಕ್ಕಿಳಿಯಲು
ನಮ್ಮಯ ಬದುಕದು ಹಸಿರು ಹೊನ್ನು ■

# ಬಣ್ಣದ ಚಿಟ್ಟೆ

■ ಚಂದನ ಜಿ.ಪಿ. ಹೊನ್ನಾಳಿ

ಅಮ್ಮಾ ನಾನು ನೋಡಿದೆ
ಹೂತೋಟದಿ ಒಂದು ಚಿಟ್ಟೆ
ಅದರ ಹಿಂದೆ ಓಡಿದೆ
ಬಿಡದೆ ಹಿಡಿದೆಬಿಟ್ಟೆ

ಬಣ್ಣವೇ ಇಲ್ಲ ನನಗೆ
ಅಳುತಾ ಹೇಳಿತು ಚಿಟ್ಟೆ
ಅಳದಿರು ಮುದ್ದು ಚಿಟ್ಟೆ
ಕೊಡುವೆ ಬಣ್ಣದ ಪಟ್ಟೆ

ಗರಿಯ ಗೊಂಚಲ ಕುಂಚವ ಮಾಡಿ
ಗುಲಾಬಿ ಹೂವಿನ ಬಣ್ಣ ಕೊಟ್ಟೆ
ಎಲೆಯ ಹಸಿರು ಪಟ್ಟಿಯ ಬರೆದು
ಮಲ್ಲಿಗೆ ಬಿಳಿಯ ನಡುವಲಿ ಇಟ್ಟೆ
ಚಿಟ್ಟೆಗೆ ಬಣ್ಣ ಬಳಿದೆ ಬಿಟ್ಟೆ

ಹಿಡದ ಚಿಟ್ಟೆಯ ಬಿಟ್ಟೆ ಬಿಟ್ಟೆ
ಸಂತಸದಿ ರೆಕ್ಕೆಯ ಬಡಿಯುತ
ಗಲ್ಲಕೆ ಮುತ್ತುಗರೆಯಿತು
ಹೂವಿಂದ ಹೂವಿಗೆ ಹಾರಿತು ■



ಹಳೇಮನಿ